# ಕಾಯುವ ಕಾಯಕ

ಮನುಷ್ಯ ಇಷ್ಟಪಡದೇ ಇರುವ ಹಲವು ಕೆಲಸಗಳಲ್ಲಿ ಯಾರಿಗಾಗಿಯೋ, ಏತಕ್ಕಾಗಿಯೋ ಕಾಯುವ ಕೆಲಸವೂ ಒಂದು. ಪ್ರಗತಿಯತ್ತ ಧಾವಿಸುತ್ತಿರುವ ಆಧುನಿಕ ಮಾನವನಿಗಂತೂ ಕಾಯಬೇಕಾದ ಸಂದರ್ಭ ಅಸಹನೀಯ. ಯಾಂತ್ರೀಕೃತ ಜೀವನ ಶೈಲಿಯ ಕಟ್ಟುಪಾಡುಗಳಿಗೆ ಒಳಗಾಗಿರುವ ನಾವು ನಮ್ಮೆಲ್ಲ ಚಟುವಟಿಕೆಗಳಲ್ಲಿ ನಮಗರಿವಿಲ್ಲದಂತೆ ಆತುರ ಪ್ರವೃತ್ತಿಯನ್ನು ಬೆಳೆಸಿಕೊಂಡಿರುತ್ತೇವೆ. ಆಹಾರ ಸೇವಿಸುವಾಗಲೂ ಆತುರ; ಕುಟುಂಬದ ಸದಸ್ಯರೊಡನೆಯೋ, ಗೆಳೆಯರೊಡನೆಯೋ ನಿರಾಳವಾಗಿ ಒಂದಿಷ್ಟು ಹರಟೆ ಹೊಡೆಯುವುದಕ್ಕೂ ಬಿಡುವಿಲ್ಲ; ಮಕ್ಕಳೊಂದಿಗೆ ಸ್ವಲ್ಪ ಕಾಲ ಕಳೆಯುವ ವ್ಯವಧಾನವೂ ನಮಗಿಲ್ಲ– ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಇಂಥ ಆತುರ, ಒತ್ತಡಗಳಿಂದಾಗಿ ನಮ್ಮ ಬದುಕಿನ ಸೊಗಸು ಹ್ರಸ್ವಗೊಳ್ಳುತ್ತದೆ ಎಂಬುದು ಸುಳ್ಳಲ್ಲ. ನಮ್ಮ ದೈನಂದಿನ ಚಟುವಟಿಕೆಗಳಿಗಷ್ಟೇ ಈ ಮನೋಭಾವ ಸೀಮಿತವಾಗಿಲ್ಲ; ವ್ಯಾವಹಾರಿಕ ಪ್ರಪಂಚದಲ್ಲೂ ಕಾಯುವಿಕೆಯನ್ನು ಕುರಿತಾದ ಮನುಷ್ಯನ ಅಸಹನೆ ಪ್ರಕಟವಾಗುತ್ತದೆ. ಉದ್ಯೋಗದಲ್ಲಿರುವವರಿಗೆ ಆದಷ್ಟು ಬೇಗ ಉದ್ಯೋಗದಲ್ಲಿ ಮೇಲಿನ ಹಂತಗಳಿಗೇರುವ ಆತುರ. ತಮ್ಮ ಮೇಲಿರುವವರನ್ನು ಹಿಂದೆ ಹಾಕಿ, ತಾವು ಪದೋನ್ನತಿಯನ್ನು ಪಡೆಯಬೇಕೆನ್ನುವ ದುಸ್ಸಾಹಸ– ಇಂಥವನ್ನೆಲ್ಲ ನಾವು ಗಮನಿಸುತ್ತಿರುತ್ತೇವೆ. ತಮ್ಮ ಮಗುವನ್ನು ಆದಷ್ಟು ತ್ವರಿತವಾಗಿ ಮುಂದೆ ತರಬೇಕೆಂಬ ಮಹತ್ವಾಕಾಂಕ್ಷೆಯಲ್ಲಿ, ಮಗುವಿನ ಇತಿಮಿತಿಗಳನ್ನು ಗಮನಿಸದೇ, ಅದರ ಮೇಲೆ ಒತ್ತಡ ಹೇರುವ ಆತುರವನ್ನೂ ಕೆಲವರು ತೋರಿಸುತ್ತಾರೆ. ಎಳೆಯ ಮನಸ್ಸು ಹಂತ ಹಂತವಾಗಿ ಬೆಳೆದು ಸಹಜ ರೀತಿಯಲ್ಲಿ ಪ್ರಬುದ್ಧತೆಯನ್ನು ದಕ್ಕಿಸಿಕೊಳ್ಳುವವರೆಗೆ ಕಾಯದೇ, ಅವಸರಿಸಿದರೆ ಅದರ ವ್ಯಕ್ತಿತ್ವ ಮುರುಟಿಕೊಳ್ಳುತ್ತದೆ ಎಂಬ ಸತ್ಯ ಅಂಥವರಿಗೆ ಗೋಚರಿಸುವುದೇ ಇಲ್ಲ.

'ಕಾಯ್ವುದುಂ ಕರ್ಮಮೆಯ' ಎನ್ನುತ್ತಾನೆ ಕುವೆಂಪು ಸೃಷ್ಟಿಸಿದ ಏಕಲವ್ಯ. 'They also serve who only stand and wait' ಎಂಬ ಮಿಲ್ಟನ್ ಕವಿಯ ಮಾತಿಗೆ ಇದು ಸಂವಾದಿಯಾಗಿದೆ. ಯಾವುದೋ ಒಂದು ನಿರೀಕ್ಷೆಯಲ್ಲಿಯೇ, ಇಲ್ಲವೇ ಒಂದು ಉದ್ದೇಶ ಸಾಧನೆಗಾಗಿಯೋ ಸೂಕ್ತ ಸಮಯದವರೆಗೆ ಕಾಯುವುದೆಂದರೆ ವೃಥಾ ಕಾಲಹರಣವಲ್ಲ. ಕಾಯುವುದೂ ಒಂದು ಕಾಯಕ. ಅದೊಂದು ತಪಸ್ಸು. 'ಕಾಯುವುದು' ಎಂಬ ಮಾತಿನಲ್ಲೇ ತಪಸ್ಸಿನಲ್ಲಿರುವ 'ತಪ್ತತೆ'ಯ ಅರ್ಥವಿದೆ. ಶಿವನ ಒಲುಮೆಯನ್ನು ಪಡೆಯಲು ಕಾಯುತ್ತಾ, ಉಮೆ ತಪಸ್ಸು ಮಾಡುತ್ತಾಳೆ; ಪುಂಡರೀಕನ ಬರುವಿಕೆಯನ್ನು ನಿರೀಕ್ಷಿಸುತ್ತಾ ಮಹಾಶ್ವೇತೆ ತಪಸ್ವಿನಿಯಾಗುತ್ತಾಳೆ. ರಾಮಾಯಣದಲ್ಲಂತೂ ಕಾಯುವಿಕೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಸಂತಾನಕ್ಕಾಗಿ ದಶರಥ ದೀರ್ಘ ಕಾಲ ಕಾಯಬೇಕಾಗುತ್ತದೆ; ಶ್ರೀರಾಮನ ಪಾದ ಸ್ಪರ್ಶದಿಂದ ತನ್ನ ಪಾವಿತ್ರ್ಯವನ್ನು ಮರಳಿ ಪಡೆಯಲು ಅಹಲ್ಯೆ ಕಾಯುತ್ತಾಳೆ; ರಾಮಾಗಮನದ ನಿರೀಕ್ಷೆಯಲ್ಲಿ ತಪಸ್ವಿಗಳು ದಂಡಕಾರಣ್ಯದಲ್ಲಿ ಕಾಯುತ್ತಾರೆ; ಭರತ ಹಾಗೂ ಅಯೋಧ್ಯೆಯ ಪ್ರಜೆಗಳು ಶ್ರೀರಾಮ ವನವಾಸವನ್ನು ಮುಗಿಸಿ ಹಿಂತಿರುಗುವುದನ್ನೇ ಕಾಯುತ್ತಿರುತ್ತಾರೆ. ಇನ್ನು ವೃದ್ಧೆ ಬೇಡತಿ ಶಬರಿಯ ಕಾಯುವಿಕೆಯಂತೂ ಎಲ್ಲರಿಗೂ ಗೊತ್ತಿರುವಂಥದು. ಲಂಕೆಯಲ್ಲಿ ಸೆರೆಯಲ್ಲಿದ್ದ ಸೀತೆ ಹಗಲಿರುಳೂ ರಾಮನಿಗಾಗಿ ಕಾಯುತ್ತಲೇ ಇರುತ್ತಾಳೆ; ಎಲ್ಲಕ್ಕೂ ಮಿಗಿಲಾಗಿ, ಸ್ವಭಾವತಃ ಲಂಪಟನಾಗಿದ್ದ ರಾವಣ ಸೀತೆಯನ್ನು ಬಲಾತ್ಕರಿಸದೇ, ಅವಳ ಒಲವನ್ನು ಪಡೆಯಲು ಕಾಯುತ್ತಿರುತ್ತಾನೆ. ಈ ಎಲ್ಲ ಕಾಯುವಿಕೆಯ ತಪಸ್ಸು ಅಂತಿಮವಾಗಿ 'ರಾಮರಾಜ್ಯ'ದ ಉದಯದಲ್ಲಿ ಫಲಿತಗೊಳ್ಳುತ್ತದೆ.

ಕಾಯುವಿಕೆಗೆ ಅಗತ್ಯವಾದ ತಾಳ್ಮೆಯ ಅಭಾವ ಅನಾಹುತ ಪರಂಪರೆಗೆ ಹೇಗೆ ಕಾರಣವಾಗಬಹುದೆಂಬುದನ್ನು ಮಹಾಭಾರತ ನಮ್ಮ ಕಣ್ಣೆದುರು ಹಿಡಿದಿರಿಸುತ್ತದೆ. (ಮಹಾ ಭಾರತದಲ್ಲಿನ ಆತುರದ ಅನರ್ಥ ಪರಿಣಾಮಗಳನ್ನು ಕುರಿತು ಪ್ರೊ. ಸುಜನಾ ಅವರು ಒಂದು ವಿಸ್ತಾರವಾದ ಪ್ರಬಂಧವನ್ನೇ ಬರೆದಿದ್ದಾರೆ) ವ್ಯಾಸರು ವಿಧಿಸಿದ ಒಂದು ವರ್ಷದ ವ್ರತಾಚರಣೆಯನ್ನು ಪೂರೈಸುವ ಸಹನೆಯಿಲ್ಲದೆ ಅಂಬಿಕೆ ಅಂಬಾಲಿಕೆಯರಿಗೆ ಹುಟ್ಟಿದ ಮಕ್ಕಳು ಕುರುಡ ಹಾಗೂ ರೋಗಿಷ್ಟರಾಗುತ್ತಾರೆ; ಮುದೊಂದು ದಿನ ಉಪಯೋಗಿಸಬೇಕಾಗಿದ್ದ ಮಂತ್ರವನ್ನು ಅಕಾಲದಲ್ಲಿ ಬಳಸಿದ ಕುಂತಿಯ ಆತುರದಿಂದಾಗಿ ಕರ್ಣ ಜನಿಸುತ್ತಾನೆ; ಕುಂತಿಯ ಆತುರದ ಪರಿಣಾಮದ ಕರಿನೆರಳು ಕರ್ಣನ ಜೀವನದುದ್ದಕ್ಕೂ ಚಾಚಿಕೊಳ್ಳುತ್ತದೆ. ಗಾಂಧಾರಿ ಸಹಜ ಹೆರಿಗೆಯ ಮುಹೂರ್ತದವರೆಗೆ ಕಾಯುವ ತಾಳ್ಮೆಯಿಲ್ಲದೇ ಅಕಾಲದಲ್ಲಿ ಪ್ರಸವಿಸಿದ ಮಾಂಸದ ಮುದ್ದೆಯಿಂದ ಅಸಹನೆ ಅಸೂಯಾ ಪೀಡಿತರಾದ ಕೌರವರು ಜನಿಸುತ್ತಾರೆ. ವೈಶಂಪಾಯನ ಸರೋವರದಲ್ಲಿ ಅಡಿಗಿಕೊಂಡಿದ್ದ ದುರ್ಯೋಧನ; ಮೈತ್ರೇಯರ ಶಾಪದ ಅವಧಿ ಮುಗಿದು, ಬಲರಾಮನ ನೆರವು ಸಿಗುವವರೆಗೆ ಕಾಯುವ ತಾಳ್ಮೆ ವಹಿಸಿದ್ದಿದ್ದರೆ, ಆತನ 'ಊರು ಭಂಗ' ವಾಗುತ್ತಿರಲಿಲ್ಲ.

ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಭೀಷ್ಮರು 'ಸೂಳ್ಪಡೆಯಲಪ್ಪುದು ಕಾಣ ಭವಾಜಿ ರಂಗದೊಳ್' ಎಂಬ ಮಾತನ್ನು ಕರ್ಣನಿಗೆ ಹೇಳುತ್ತಾರೆ. 'ಸೂಳ್' ಎಂದರೆ ಸರದಿ. ಯುದ್ಧರಂಗದಲ್ಲೂ ಪ್ರತಿಯೊಬ್ಬ ಯೋಧರೂ ತನ್ನ ಸರದಿಗಾಗಿ ಕಾಯಬೇಕು; ಹಾಗೆ ಕಾಯುವ ಸಹನೆಯಿಲ್ಲದಿದ್ದರೆ ಸೈನ್ಯದ ಶಿಸ್ತು ಶಿಥಿಲಗೊಂಡು, ಗೊಂದಲಕ್ಕೆ ಅವಕಾಶವಾಗುತ್ತದೆ. ಹಾಗೆಯೇ ನಮ್ಮ ನಮ್ಮ ಬದುಕಿನಲ್ಲೂ ಸರದಿಗಾಗಿ ಕಾಯುವ ತಾಳ್ಮೆಯಿರಬೇಕು– ಇದು ಪಂಪ ಕವಿ ನಮ್ಮ ಮುಂದಿಡುವ ಒಂದು ಮೌಲಿಕವಾದ ಸಂದೇಶ!

■ ವೈನತೇಯ

## ಮಾತೇ ಮುತ್ತು

★ ಜಾಣೆಯಾದ ಹೆಂಡತಿ ಗಂಡನ ಸಲಹೆಗಳನ್ನು ಕೇಳುತ್ತಾಳೆ; ಆದರೆ, ಅದರಂತೆ ನಡೆದುಕೊಳ್ಳುವುದಿಲ್ಲ!

-ಸರ್ವಾಂಟಿಸ್

★ ಅಸತ್ಯದಿಂದ ಸತ್ಯ ಎಂದಿಗೂ ಹುಟ್ಟುವುದಿಲ್ಲ.

-ಮಹಾವೀರ

★ ಇತರರ ಗುಣಗ್ರಹಣ ಮಾಡಬೇಕಾದರೆ ನಾವು ನಮ್ಮ ಅಹಂಕಾರವನ್ನು ತ್ಯಜಿಸಬೇಕು. ಅಹಂಕಾರಿಗಳಲ್ಲಿ ಗುಣಗ್ರಾಹಿತ್ವ ಇರಲಾರದು.

-ವೀರೇಂದ್ರ ಹೆಗಡೆ

★ ಅನ್ನದೊಳಗೊಂದಗುಳ
ಸೀರೆಯೊಳಗೊಂದೆಳೆಯ
ಚಿನ್ನದೊಳಗೊಂದೊರೆಯ ಇಂದಿಂಗೆ ನಾಳಿಂಗೆ
ಎಂದುಕೊಂಡೆನಾದೊಡೆ ತಲೆ ದಂಡ.

-ಬಸವಣ್ಣ

★ ಓದು ಬರಹದ ಶತ್ರು! ಆದರೆ ಬರಹಗಾರ ಓದಲೇಬೇಕು, ಹೆಚ್ಚು ಓದಬೇಕು.

-ಅನುಭವಾಮೃತ

★ ಯಶಸ್ಸು ಸತತ ಪ್ರಯತ್ನದ ಫಲ. ಕೊನೆಯ ಹೊಡೆತಕ್ಕೆ ಕಲ್ಲು ತುಂಡಾಗುತ್ತದೆ; ಅದರರ್ಥ ಮೊದಲ ಹೊಡೆತ ವ್ಯರ್ಥವೆಂದಲ್ಲ.

-ಹಿತ ನುಡಿ

★ ಬಡತನವೇ ಕ್ರಾಂತಿ ಹಾಗೂ ಅಪರಾಧಗಳ ತಾಯಿ ತಂದೆ.

-ಅರಿಸ್ಟಾಟಲ್

★ ಏನೂ ಇಲ್ಲದವನು ಬಡವನಲ್ಲ; ಇನ್ನೂ ಬೇಕು ಅನ್ನುವವನೇ ಬಡವ.

-ಸೆನಕ

★ ನಾವು ನಂಬುವ ತತ್ವಗಳಿಗಿಂತ, ದೇವರಿಗಿಂತ; ನಾವು ಬದುಕುವ ರೀತಿ ಮುಖ್ಯ.

-ಎ.ಎನ್.ಮೂರ್ತಿರಾವ್

★ 'ಬದುಕಿ, ಇತರರನ್ನು ಬದುಕಲು ಬಿಡಿ' ಎಂಬುದೇ ನಮ್ಮ ಜೀವನದ ಮಂತ್ರವಾಗಬೇಕು.

-ಮಹಾತ್ಮ ಗಾಂಧೀಜಿ

★ ಶಿಸ್ತಿನ ಬಹುಮತವೇ ಸತ್ಯದ ಅಪಾಯಕಾರಿ ಶತ್ರು.

-ಇಬ್ಸನ್

★ ಬರವೇ ಇರಲಿ, ಸಮೃದ್ಧಿ ಬರಲಿ– ತಾಳುವ ಬಾಳಿನ ಬಾವುಟವಿರಲಿ.

-ಕೆ.ಎಸ್.ನರಸಿಂಹಸ್ವಾಮಿ

★ ಪ್ರೇಮಕ್ಕೂ ಮಿಲಿಟರಿ ಆಡಳಿತಕ್ಕೂ ವ್ಯತ್ಯಾಸ ಇಲ್ಲ.

-ಲ್ಯಾಟಿನ್ ಗಾದೆ